# ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಗಣಪತಿ ದುಮ್ಮಾ ಉಳ್ವೇಕರ್, (ಸ್ಥಳೀಯ ಸಂಸ್ಥೆ) ಇವರು ಗಮನ ಸೆಳೆಯುವ ಸೂಚನೆ ನಿಯಮ – 72 ರಡಿ ಮಹಾರಾಷ್ಟ್ರ ಮತ್ತು ಕೇರಳ ರಾಜ್ಯಗಳ ಮಾದರಿಯಲ್ಲಿ ಐ.ವಿ ನಿಯಮದಡಿಯಲ್ಲಿ Refresher Course ಪ್ರಮಾಣ ಪತ್ರ ಇಲ್ಲದೇ ರಾಜ್ಯದಲ್ಲಿ ಇನ್‌ಲ್ಯಾಂಡ್ ಮಾಸ್ಟರ್ ಮತ್ತು ಇಂಜಿನ್ ಡ್ರೈವರ್ ಹುದ್ದೆಗೆ ಪರೀಕ್ಷೆ ನಡೆಸುವ ಬೇಡಿಕೆ ಇದ್ದು ಕುರಿತು ಪ್ರಸ್ತಾಪಿಸಿರುವ ಪ್ರಶ್ನೆಗೆ ಉತ್ತರ

**ವಿಷಯ**:- ನಮ್ಮ ರಾಜ್ಯದಲ್ಲಿಯೂ, ಮಹಾರಾಷ್ಟ್ರ ಮತ್ತು ಕೇರಳ ರಾಜ್ಯಗಳ ಮಾದರಿಯಲ್ಲಿ Refresher Course ಪ್ರಮಾಣ ಪತ್ರ ಇಲ್ಲದೇ ಇನ್‌ಲ್ಯಾಂಡ್ ಮಾಸ್ಟರ್ ಇಂಜಿನ್ ಡ್ರೈವರ್ ಹುದ್ದೆಗೆ ಪರೀಕ್ಷೆ ನಡೆಸಲು ಬೇಡಿಕೆ ಇದ್ದು, ಕಾರವಾರ ನೇವಲ್ ಬೇಸ್‌ನ ಕಮಾಂಡರ್ ಆಫ್ ಯಾರ್ಡ್‌ನ ಖಾಯಂ ನೌಕರರು ಹಾಗೂ ಅನೇಕ ನಿರಾಶ್ರಿತರು ಅನುಭವ- ಅರ್ಹತೆ ಹೊಂದಿದ್ದು, ಪ್ರಮಾಣ ಪತ್ರ ಇಲ್ಲದೇ ಇರುವ ಕಾರಣ ಇನ್‌ಲ್ಯಾಂಡ್ ಮಾಸ್ಟರ್ ಹಾಗೂ ಇಂಜಿನ್ ಡ್ರೈವರ್ ಹುದ್ದೆಯಲ್ಲಿ ಉದ್ಯೋಗ ಮತ್ತು ಮುಂಬಡ್ತಿ ಹೊಂದಲು ತೊಂದರೆ ಆಗುತ್ತಿರುವುದರಿಂದ, Refresher Course ಪ್ರಮಾಣ ಪತ್ರ ಇಲ್ಲದೇ ರಾಜ್ಯದಲ್ಲಿಯೇ ಪರೀಕ್ಷೆ ನಡೆಸಲು ಮಾನ್ಯ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರ ಗಮನ ಸೆಳೆಯುವುದು.

*****

## ಸರ್ಕಾರದ ಉತ್ತರ

ಇನ್‌ಲ್ಯಾಂಡ್ ವೆಸಲ್ಸ್ ಆಕ್ಟ್ 1917 ರ ಅಡಿಯಲ್ಲಿ ಐ.ವಿ (Inland Vessels) ಪರಿಮಿತಿಯಲ್ಲಿ ಸಂಚರಿಸುವ ನಾವೆಗಳಲ್ಲಿ ಕೆಲಸ ಮಾಡಲು ಅನುಕೂಲವಾಗುವಂತೆ ರಾಜ್ಯದ ಯುವಕರಿಗೆ ಮಾಸ್ಟರ್, ಸಾರಂಗ್, ಇಂಜಿನೀಯರ್ ಮತ್ತು ಇಂಜಿನ್ ಡ್ರೈವರ್ ಪ್ರಮಾಣ ಪತ್ರ ನೀಡುವ ಬಗ್ಗೆ ಅರ್ಹತಾ ಪರೀಕ್ಷೆಯನ್ನು ನಡೆಸಲು ಸಕ್ಷಮ ಪ್ರಾಧಿಕಾರವನ್ನು ನೇಮಿಸಿ ಸರ್ಕಾರದ ಆದೇಶ ಸಂಖ್ಯೆ: PWD 104 PSP 03, ದಿನಾಂಕ: 20.12.2005 ರಂತೆ ಅಧಿಸೂಚನೆ ಹೊರಡಿಸಲಾಗಿರುತ್ತದೆ. ಅಲ್ಲದೇ ಸರ್ಕಾರದ ಅಧಿಸೂಚನೆ ಸಂಖ್ಯೆ: PWD 104 PSP 03 ದಿನಾಂಕ: 05.10.2006 ರಂತೆ Karnataka Inland Vessels Rules 2006 ಜಾರಿಗೊಳಿಸಲಾಗಿರುತ್ತದೆ. ರಾಜ್ಯದ ಯುವಕರಿಗೆ ಅನುಕೂಲವಾಗುವಂತೆ ಐ.ವಿ (Inland Vessels) ಆಕ್ಟ್ 1917 ರ ಅಡಿಯಲ್ಲಿ ಮಾಸ್ಟರ್ / ಇಂಜಿನೀಯರ್ ಗ್ರೇಡ್ ಸಕ್ಷಮತಾ ಪ್ರಮಾಣ ಪತ್ರವನ್ನು ನೀಡುವ ಬಗ್ಗೆ Board of Seafarers Trust Mumbai ಸಂಸ್ಥೆಯೊಂದಿಗೆ ಒಡಂಬಡಿಕೆ ನಿರ್ವಹಿಸಲಾಗಿರುತ್ತದೆ.

ಅದರಂತೆ ಸದರಿ ನಿಯಮದಡಿಯಲ್ಲಿ ಮಾಸ್ಟರ್, ಸಾರಂಗ್, ಇಂಜಿನೀಯರ್ ಮತ್ತು ಇಂಜಿನ್ ಡ್ರೈವರ್ ಪ್ರಮಾಣ ಪತ್ರ ನೀಡುವ ಬಗ್ಗೆ ಅರ್ಹ ಅಭ್ಯರ್ಥಿಗಳಿಗೆ ಪರೀಕ್ಷೆ ಮಾಡಿ ಸಕ್ಷಮತಾ ಪ್ರಮಾಣ ಪತ್ರ ನೀಡುವ ಬಗ್ಗೆ ಸರ್ಕಾರದಿಂದ ಪಠ್ಯ ಕ್ರಮ ಅನುಮೋದನೆಗೊಳಿಸಿ ಸರ್ಕಾರದ ಆದೇಶ ಸಂಖ್ಯೆ: IDD 12 BNS 2020 3349 (ಇ- 334902), ದಿನಾಂಕ: 08.12.2020 ರಂದು ಅಧಿಸೂಚನೆ ಹೊರಡಿಸಲಾಗಿರುತ್ತದೆ.

ಸದರಿ ಅಧಿಸೂಚನೆಯಂತೆ ಪ್ರಾಥಮಿಕ ಹಂತದಲ್ಲಿ Master Grade –III ಮತ್ತು Engine Driver Class-II ಪ್ರಮಾಣ ಪತ್ರ ಪಡೆಯುವ ಕುರಿತು ಯಾವುದೇ Refresher Course ನ್ನು ನಿಗದಿಪಡಿಸಲಾಗಿರುವುದಿಲ್ಲ. ಆದರೆ ಮುಂದಿನ ಹಂತವಾಗಿರುವ Master Grade –II ಮತ್ತು Master Grade –I ಹಾಗೂ Engine Driver Class-I ಮತ್ತು Engineer ಪ್ರಮಾಣ ಪತ್ರವನ್ನು ಹೊಂದುವ ಪರೀಕ್ಷಾ ಮಾನದಂಡವಾಗಿ ಕೇಂದ್ರ ಸರ್ಕಾರದ Director General of Shipping (DGS) ನಿಂದ ಅನುಮೋದಿತವಾದ ಸಂಸ್ಥೆಯಿಂದ 4 ವಾರಗಳ ಮತ್ತು 6 ವಾರಗಳ Refresher Course ನ್ನು ನಿಗದಿಪಡಿಸಲಾಗಿರುತ್ತದೆ.

ಸದರಿ ಅಧಿಸೂಚನೆಯಲ್ಲಿ ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಗಳಿಗೆ ಕೆಲವೊಂದು ಅರ್ಹತಾ ಮಾನದಂಡಗಳನ್ನು (Eligibility Criteria) ನಿಗದಿಪಡಿಸಲಾಗಿದ್ದು, ಅದರಂತೆ Master Grade –II ಮತ್ತು Master Grade –I ಹಾಗೂ Engine Driver Class-I ಮತ್ತು Engineer ಸಕ್ಷಮತಾ ಪ್ರಮಾಣ ಪತ್ರವನ್ನು ಪಡೆಯಲು Online ಅರ್ಜಿಸಲ್ಲಿಸುವ ಸಮಯದಲ್ಲಿ ಅಭ್ಯರ್ಥಿಗಳು ಅಧಿಸೂಚಿಸಲಾದ ಪಠ್ಯಕ್ರಮದಲ್ಲಿ ನಿಗದಿಪಡಿಸಿದಂತೆ ಕಡ್ಡಾಯವಾಗಿ Refresher Course ನ್ನು ಮಾಡಿ ಸಂಸ್ಥೆಯಿಂದ ಪ್ರಮಾಣ ಪತ್ರವನ್ನು ಪಡೆದು ಸಲ್ಲಿಸುವುದು ಅವಶ್ಯವಾಗಿರುತ್ತದೆ. ಆದರೆ ನಮ್ಮ ರಾಜ್ಯದಲ್ಲಿ ಇಂತಹ Refresher Course ಗಳನ್ನು ನಡೆಸುವ ಯಾವುದೇ ಅನುಮೋದಿತ ಸಂಸ್ಥೆಗಳು ಇರುವುದಿಲ್ಲ. ಆದ್ದರಿಂದ ಈಗಾಗಲೇ ಸದರಿ ಪ್ರಮಾಣ ಪತ್ರಗಳನ್ನು ಪಡೆಯಲು ಅರ್ಜಿಸಲ್ಲಿಸಿದ ಅಭ್ಯರ್ಥಿಗಳ ಅನುಕೂಲಕ್ಕಾಗಿ DG Shipping Mumbai ಇವರಿಂದ ಅನುಮೋದಿತಗೊಂಡ M/s Sea Scam Maritime Foundation, Goa ಎಂಬ ಸಂಸ್ಥೆಯನ್ನು ನಿಗದಿಪಡಿಸಲಾಗಿರುತ್ತದೆ. ಹಾಗೂ ಈ ಅಭ್ಯರ್ಥಿಗಳಿಗೆ ಸದರಿ ಸಂಸ್ಥೆಯಿಂದ Refresher Course Certificate ಪಡೆಯುವಂತೆ ಸೂಚಿಸಲಾಗಿರುತ್ತದೆ.

ಇನ್‌ಲ್ಯಾಂಡ್ ವೆಸಲ್ಸ್ ನಿಯಮಗಳ ಅಡಿಯಲ್ಲಿ ಇತ್ತೀಚಿನ ವರ್ಷಗಳಲ್ಲಿ ಉಂಟಾದ ಬದಲಾವಣೆಗಳಿಂದ ಹಾಗೂ ಪ್ರಯಾಣಿಕರನ್ನು ಮತ್ತು ಸರಕುಗಳನ್ನು ಮತ್ತು ಸಂಚರಿಸುವ ನಾವೆಗಳ ಸುರಕ್ಷತೆಯ ದೃಷ್ಟಿಯಿಂದ ಸದರಿ ನಾವೆಗಳಲ್ಲಿ ಹೆಚ್ಚಿನ ಅನುಭವ ಹೊಂದಿದ ಹಾಗೂ ಸದರಿ ನಿಯಮದಡಿಯಲ್ಲಿ ಪ್ರಮಾಣ ಪತ್ರವನ್ನು ಪಡೆದ ಅಭ್ಯರ್ಥಿಗಳನ್ನು ನಿಯೋಜಿಸಲಾಗುತ್ತಿದೆ. ಕೇಂದ್ರ ಸರ್ಕಾರದಿಂದ ಈಗಾಗಲೇ ಇಂಡಿಯನ್ ವೆಸಲ್ಸ್ ಅಧಿನಿಯಮ 2021 ರ ಅಧಿಸೂಚನೆಯಾಗಿರುತ್ತದೆ. ಹಾಗೂ ಸದರಿ ಅಧಿಸೂಚನೆಯಡಿಯಲ್ಲಿ ಕರಡು ನಿಯಮಗಳನ್ನು ರಚಿಸಲಾಗಿರುತ್ತದೆ. ಸದರಿ ಕರಡು ನಿಯಮಗಳಲ್ಲಿ ಸಹ ಐ.ವಿ ನಾವೆಗಳಲ್ಲಿ ದುಡಿಯುವ ಅಭ್ಯರ್ಥಿಗಳು ಪಡೆಯಬೇಕಾದ ಪ್ರಮಾಣ ಪತ್ರದ ಸಂದರ್ಭದಲ್ಲಿ ಇಂತಹ Refresher Course ಗಳನ್ನು ನಿಗದಿಪಡಿಸಲಾಗಿದೆ.

ಆದ್ದರಿಂದ ಐ.ವಿ ನಿಯಮಗಳ ಅಡಿಯಲ್ಲಿ ಸಂಚರಿಸುವ ನಾವೆಗಳಲ್ಲಿ ರಾಜ್ಯದ ಅಭ್ಯರ್ಥಿಗಳಿಗೆ ಸಕ್ಷಮತಾ ಪ್ರಮಾಣ ಪತ್ರವನ್ನು (Certificate of Competency) ನೀಡುವ ಕುರಿತು ನಡೆಸಲಾಗುವ ಪರೀಕ್ಷೆಗೆ ಹಾಜರಾಗುವ ಪೂರ್ವದಲ್ಲಿ ಈಗಾಗಲೇ ಸರ್ಕಾರದ ಅಧಿಸೂಚನೆಯಂತೆ ಪ್ರಕಟಿಸಲಾದ ಪಠ್ಯಕ್ರಮದ ಆಧಾರದ ಮೇಲೆ ಸೂಕ್ತ ಅರ್ಹತಾ ಮಾನದಂಡವನ್ನು ಹೊಂದುವುದು ಅವಶ್ಯವಾಗಿರುತ್ತದೆ. ಸದರಿ ಪರೀಕ್ಷೆಗಳನ್ನು ನಡೆಸಲು ಸಕ್ಷಮ ಪ್ರಾಧಿಕಾರವಾದ Board of Examination

for Seafarers Trust Mumbai ಇವರು ಈಗಾಗಲೇ ಅವರ Website ಮೂಲಕ ಪರೀಕ್ಷೆಗೆ ಹಾಜರಾಗುವ ಅರ್ಹ ಅಭ್ಯರ್ಥಿಗಳಿಂದ ಅರ್ಜಿಯನ್ನು ಕರೆದಿದ್ದು, ನಮ್ಮ ರಾಜ್ಯದ 35 ಅಭ್ಯರ್ಥಿಗಳು ಈಗಾಗಲೇ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಆದರೆ ಅವರು ಸರ್ಕಾರದಿಂದ ಅನುಮೋದಿತಗೊಂಡ ಪಠ್ಯಕ್ರಮಕ್ಕೆ ಅನುಗುಣವಾಗಿ Refresher Course ಪಡೆದ ಪ್ರಮಾಣ ಪತ್ರವನ್ನು ಸಲ್ಲಿಸಿರುವುದಿಲ್ಲ. ಈ ಕುರಿತು ಅವರಿಗೆ ಈಗಾಗಲೇ ಸದರಿ ತರಬೇತಿಯನ್ನು ನಡೆಯುವ ಸಂಸ್ಥೆಯನ್ನು ಸಂಪರ್ಕಿಸಿ ತರಬೇತಿಯನ್ನು ಪಡೆದು ಅವರಿಂದ ಪಡೆದ ಪ್ರಮಾಣ ಪತ್ರದಿಂದ Board of Examination for Seafarers Trust Mumbai ಸಂಸ್ಥೆಯ Website ನಲ್ಲಿ upload ಮಾಡಲು ಸೂಚಿಸಲಾಗಿರುತ್ತದೆ. ಸದರಿ ಪ್ರಕ್ರಿಯೆ ಮುಗಿದ ಕೂಡಲೇ Board of Examination for Seafarers Trust Mumbai ಸಂಸ್ಥೆಯವರು ಸೂಕ್ತ ಪರೀಕ್ಷೆಯನ್ನು ನಡೆಸಿ ಉತ್ತೀರ್ಣಗೊಂಡ ಅಭ್ಯರ್ಥಿಗಳಿಗೆ ಇಲಾಖೆಯಿಂದ ಸಕ್ಷಮತಾ ಪ್ರಮಾಣ ಪತ್ರವನ್ನು ನೀಡಲು ಕ್ರಮ ಜರುಗಿಸಲಾಗುವುದು.

**ಕಡತ ಸಂಖ್ಯೆ:** IDD 54 PSP 2022 (E-726375)

(ಎಸ್. ಅಂಗಾರ)
**ಮೀನುಗಾರಿಕೆ, ಬಂದರು ಮತ್ತು**
**ಒಳನಾಡು ಜಲಸಾರಿಗೆ ಸಚಿವರು**